SC 5/2023
PW.9

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 5/2023** **ಅಸಾ.9**
**ಚಾಸಾ.4**

ಸಾಕ್ಷಿದಾರರ ಹೆಸರು - ರವೀಂದ್ರ ಕರ್ಕೇರಾ
ತಂದೆಯ ಹೆಸರು - ಅಚ್ಚು
ವಯಸ್ಸು - 53 ವರ್ಷ
ಉದ್ಯೋಗ - ಖಾಸಗಿ
ವಿಳಾಸ - ಹಿರಿಯಡ್ಕ.

ದಿನಾಂಕಃ 17.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

ಚಾಸಾ1 ನನ್ನ ಹೆಂಡತಿ. ಮೃತ ಕೃತಿಕ ನನ್ನ ಹೆಂಡತಿಯ ಅಣ್ಣನ ಮಗ. ಆರೋಪಿಯ ಪರಿಚಯ ಇದೆ. ಆತ ನನ್ನ ಹೆಂಡತಿಯ ಮನೆಯ ಪಕ್ಕದಲ್ಲಿ ವಾಸ ಮಾಡಿಕೊಂಡಿದ್ದ. ಆತನ ತಂದೆ ತಾಯಿ ಮೃತ ಪಟ್ಟಿದ್ದು, ಕೃತಿಕ ನಮ್ಮ ಮನೆಯಲ್ಲಿಯೇ ವಾಸ ಮಾಡಿಕೊಂಡಿದ್ದ. ಆರೋಪಿ ಬ್ರಹ್ಮಾವರದ ಹೇರೂರಿನಲ್ಲಿ ಹೋಟೆಲ್ ಬ್ಯುಸಿನೆಸ್ ಮಾಡಿಕೊಂಡಿದ್ದು, ಆ ಸಮಯದಲ್ಲಿ ಕೃತಿಕ್ ಆತನ ಜೊತೆ ತಿರುಗಾಡುವುದು ಮತ್ತು ಹೋಟೆಲ್ ವ್ಯವಹಾರದಲ್ಲಿ ಆತನಿಗೆ ಸಹಕಾರ ಮಾಡುತ್ತಿದ್ದ.

2. ಚಾಸಾ13 ಶಾರದಾ ನಮ್ಮ ಮನೆಯ ಬಳಿಯಲ್ಲಿ ವಾಸ ಮಾಡಿಕೊಂಡಿದ್ದು ನಂತರ ಆಕೆಗೆ ಮುಂಡ್ಕೂರಿಗೆ ಮದುವೆಯಾಗಿದ್ದು ಮುಂಡ್ಕೂರಿನಲ್ಲಿ ವಾಸ ಮಾಡಿಕೊಂಡಿದ್ದಳು. ಮೃತ ಕೃತಿಕ ಮತ್ತು ಶಾರದಾ ಇವರು ಫೋನಿನಲ್ಲಿ ನಿರಂತರ ಮಾತನಾಡುತ್ತಿದ್ದ ಕಾರಣ ಶಾರದಾಳ

ಗಂಡನ ಮನೆಯವರಿಗೆ ಈ ಬಗ್ಗೆ ಅನುಮಾನ ಬಂದು, ನಮ್ಮ ಮನೆಗೆ ಬಂದು ವಿಚಾರ ತಿಳಿಸಿದ್ದು, ನಾವು ನಂತರ ಕೃತಿಕನಿಗೆ ಅವಳ ಸಂಪರ್ಕದಲ್ಲಿ ಇರಬಾರದು ಎಂದು ತಿಳಿಸಿರುತ್ತೇವೆ. ಮೃತ ಕೃತಿಕ್ ಈತನ ಹೆಸರಿನಲ್ಲಿ ಹಿರಿಯಡ್ಕದ ಕೆನರಾ ಬ್ಯಾಂಕಿನಲ್ಲಿ ಮತ್ತು ಪೆರ್ಡೂರಿನ ವಿಜಯಾ ಬ್ಯಾಂಕಿನಲ್ಲಿ ಹಣ ಮತ್ತು ಬಂಗಾರದ ಆಭರಣಗಳನ್ನು ಇಟ್ಟಿದ್ದೆವು.

3. ದಿನಾಂಕ 14-09-2022 ರಂದು ಬೆಳಿಗ್ಗೆ ನನ್ನ ಹೆಂಡತಿ ನಾನು ಉಡುಪಿಯಲ್ಲಿ ಕೆಲಸದಲ್ಲಿ ಇದ್ದಾಗ ದೂರವಾಣಿ ಕರೆ ಮಾಡಿ ಕೃತಿಕ ಆತ್ಮಹತ್ಯೆ ಮಾಡಿಕೊಂಡ ವಿಚಾರ ತಿಳಿಸಿರುತ್ತಾಳೆ. ತಕ್ಷಣ ನಾನು ಬೆಳಿಗ್ಗೆ 8-45 ಗಂಟೆಗೆ ಘಟನಾ ಸ್ಥಳಕ್ಕೆ ಬಂದಿದ್ದೆ. ನಾನು ಹೆಂಡತಿಯ ಬಳಿ ವಿಚಾರಿಸಿದಾಗ ಬೆಳಿಗ್ಗೆ 4-45 ಗಂಟೆಗೆ ಮೂತ್ರ ಮಾಡಿ ಬರುತ್ತೇನೆ ಎಂದು ಹೇಳಿ ಹೋಗಿದ್ದ ಕೃತಿಕ್ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದು ತಿಳಿಸಿರುತ್ತಾನೆ. ಆತನ ಮೃತ ದೇಹದಲ್ಲಿ ಒಂದು ಮರಣ ಪತ್ರ ಸಿಕ್ಕಿದ್ದು ಅದರಲ್ಲಿ ಚಾಸಾ13 ಶಾರದಾ ಇವರ ಕುರಿತಂತೆ ಬರವಣಿಗೆ ಇತ್ತು. ನಂತರ ಸದ್ರಿ ಶವವನ್ನು ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಶವ ಪಂಚನಾಮೆಯ ಸಲುವಾಗಿ ತೆಗೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ದಾಖಲು ಮಾಡಿಕೊಂಡಿರುತ್ತಾರೆ.

4. ನಂತರ ಆತನ ಶವವನ್ನು ಮನೆಗೆ ತಂದು ಅಂತಿಮ ಸಂಸ್ಕಾರ ಮಾಡಲಾಯಿತು. ನಂತರ ಮೃತ ಕೃತಿಕನ ಬ್ಯಾಂಕ್ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಅಲ್ಲಿ ಹಣ ಇಲ್ಲದೇ ಇದ್ದುದರಿಂದ ನಮಗೆ ಆಗ ದಿನೇಶ ಸಪಲಿಗನ ಜೊತೆ ಮೃತ ಕೃತಿಕ್ ಹೆಚ್ಚಾಗಿ ಓಡಾಡುತ್ತಿದ್ದರಿಂದ ನಮಗೆ ಆತನ ಮೇಲೆ ಅನುಮಾನ ಬಂದು ನನ್ನ ಹೆಂಡತಿ ಆತನ ವಿರುದ್ಧ ಮೃತ ಕೃತಿಕನ ಸಾವಿಗೆ ಸಂಬಂಧಪಟ್ಟಂತೆ ದೂರು ನೀಡಿರುತ್ತಾಳೆ. ನಂತರ ಪೋಲಿಸರು ಹಿರಿಯಡ್ಕ ಪೋಲಿಸ್

ಠಾಣೆಯಲ್ಲಿ ದಿನೇಶ ಸಪಲಿಗನನ್ನು ನಮ್ಮ ಸಮಕ್ಷಮದಲ್ಲಿ ವಿಚಾರಿಸಿದಾಗ, ತಾನು ಕೊಲೆಗೆ ಯೋಜನೆ ರೂಪಿಸಿದ ಬಗ್ಗೆ ವಿವರವಾಗಿ ತಿಳಿಸಿರುತ್ತಾನೆ. ದಿನಾಂಕ 23-10-2022 ರಂದು ಆರೋಪಿ ದಿನೇಶ ಸಪಲಿಗ ಈತನು ಪೋಲಿಸರನ್ನು ನಮ್ಮ ಮನೆಯ ಬಳಿ ಕರೆದುಕೊಂಡು ಬಂದಿದ್ದು ನಮ್ಮ ಮನೆಯ ಬಳಿ ಇದ್ದ ಕೃತಿಕನು ಸ್ಕೂಟರನ್ನು ತೋರಿಸಿ ಇದೇ ಸ್ಕೂಟರನ್ನು ತಾನು ಕೃತ್ಯದ ಸಮಯ ಉಪಯೋಗಿಸಿರುವುದಾಗಿ ತಿಳಿಸಿರುತ್ತಾನೆ. ನಮ್ಮ ಸಮಕ್ಷಮದಲ್ಲಿ ಪೋಲಿಸರು ಸದ್ರಿ ಸ್ಕೂಟರನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆಯನ್ನು ಮಾಡಿರುತ್ತಾರೆ. ಸದ್ರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ನಾನು ಈಗ ನೋಡುತ್ತಿದ್ದು, ಅದನ್ನು ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಆರು ಛಾಯಾ ಚಿತ್ರಗಳನ್ನು ನೋಡುತ್ತಿದ್ದು, ಅವುಗಳನ್ನು ಒಟ್ಟಾಗಿ ನಿಪಿ-19 ಎಂದು ಗುರುತಿಸಲಾಯಿತು. ನಿಪಿ-19 ರಲ್ಲಿರುವ ಸ್ಕೂಟರನ್ನು ಸಾಕ್ಷಿ ನೋಡಿ ಗುರುತಿಸಿ ಇದೇ ಸ್ಕೂಟರನ್ನು ಪೋಲಿಸರು ಅಮಾನತ್ತುಪಡಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿಯ ಪರ ಶ್ರೀ ಎಸ್.ಎ. ವಕೀಲರಿಂದಃ</u>**

ಕೃತಿಕ ಮತ್ತು ದಿನೇಶ ಸಪಲಿಗ ಅವರೊಳಗೆ ಏನು ವ್ಯವಹಾರ ಇತ್ತು ಮತ್ತು ಯಾವ ರೀತಿಯ ಸಂಬಂಧ ಇತ್ತು ಎಂದು ನನಗೆ ಗೊತ್ತಿಲ್ಲ. ಕೃತಿಕ ಸಾಯುವ ಮೊದಲು ಆತನ ಜೊತೆ ಮತ್ತು ದಿನೇಶನ ಜೊತೆ ಅವರ ಸಂಬಂಧ ಮತ್ತು ವ್ಯವಹಾರದ ಬಗ್ಗೆ ಮಾತನಾಡಿಲ್ಲ. ಶಾರದಾಳ ಮನೆಯವರು ನನ್ನ ಹೆಂಡತಿಯ ಮನೆಗೆ ಬಂದು ಏನು ಮಾತನಾಡಿದ್ದಾರೆ ಮತ್ತು ಯಾರೆಲ್ಲಾ ಬಂದಿದ್ದಾರೆ ಎಂದು ಗೊತ್ತಿಲ್ಲ, ನಾನು ಆ ಸಮಯದಲ್ಲಿ ಇರಲಿಲ್ಲ. ಕೃತಿಕನಿಗೆ ಕುಡಿಯುವ ಅಭ್ಯಾಸ ಇತ್ತು. ಆತನಿಗೆ ಹುಡುಗಿಯರ ಸಹವಾಸ ಇತ್ತು.

2. ಕೃತಿಕನ ತಂದೆ ತೀರಿಕೊಂಡ ನಂತರ ಆತ ಮನೆಯಲ್ಲಿ ಮಂಕ್ ಆಗಿ ಇರುತ್ತಿದ್ದ. ಹೊರಗಡೆ ಚೆನ್ನಾಗಿರುತ್ತಿದ್ದ. ಆತ ಹುಡುಗಿಯರ ಜೊತೆ ಓಡಾಡುತ್ತಿದ್ದ ಎಂದರೆ ಸರಿ. ಆತ ಕುಡಿತದ ಚಟಕ್ಕೆ ಮತ್ತು ಹುಡುಗಿಯರ ಸಹವಾಸಕ್ಕೆ ತುಂಬಾ ಹಣ ಖರ್ಚು ಮಾಡುತ್ತಿದ್ದ ಎಂದರೆ ಸರಿ. ಕೃತಿಕನ ಸ್ಕೂಟರನ್ನು ಪೋಲಿಸರು ಬಂದು ನಮ್ಮ ಮನೆಯಿಂದ ತೆಗೆದುಕೊಂಡು ಹೋಗಿರುತ್ತಾರೆ. ನನ್ನ ಹೆಂಡತಿಯ ಅಕ್ಕನ ಮಗ ಪ್ರಶಾಂತ್ ಕುಮಾರ್ ಪೋಲಿಸರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತಾರೆ. ಆ ರೀತಿ ಬಂದ ಪೋಲಿಸರು ಸುಮಾರು ಅರ್ಧ ಮುಕ್ಕಾಲು ಗಂಟೆಯಲ್ಲಿ ಸ್ಕೂಟರನ್ನು ತೆಗೆದುಕೊಂಡು ಹೋಗಿರುತ್ತಾರೆ. ನಂತರದಲ್ಲಿ ನಾನು ಪೋಲಿಸ್ ಠಾಣೆಗೆ ಹೋಗಿಲ್ಲ.

3. ಪೋಲಿಸರು ಒಂದು ಬಾರಿ ಮಾತ್ರ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಕೃತಿಕನ ಬ್ಯಾಂಕ್ ಖಾತೆಗಳಲ್ಲಿ ಎಷ್ಟು ಹಣ ಇತ್ತು ಎಂದು ನನಗೆ ಗೊತ್ತಿಲ್ಲ. ಯಾವ ಯಾವ ಸಮಯದಲ್ಲಿ ಎಷ್ಟು ಎಷ್ಟು ಹಣ ಯಾರು ಯಾರು ತೆಗೆದುಕೊಂಡಿದ್ದಾರೆ ಗೊತ್ತಿಲ್ಲ. ಕೃತಿಕ್ ಮೃತ ಹೊಂದಿದ್ದರಿಂದ ಆತನ ಆಸ್ತಿ ಎಲ್ಲಾ ನಮಗೆ ಬಂದಿರುತ್ತದೆ ಎಂದರೆ ಸರಿ. ಪೋಲಿಸರು ನಮ್ಮ ಮನೆಗೆ ಬಂದು ನಾನು ಹೇಳಿದ ರೀತಿ ಸ್ಕೂಟರನ್ನು ಅಮಾನತ್ತುಪಡಿಸಿಕೊಂಡಿಲ್ಲ ಮತ್ತು ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-18 ಕ್ಕೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ-19 ಭಾವಚಿತ್ರಗಳನ್ನು ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಕೃತಿಕ ತನ್ನ ತಂದೆ ತೀರಿಕೊಂಡ ನಂತರ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದ ಮತ್ತು ಹೆಂಗಸರ ಸಹವಾಸಕ್ಕೆ ಮತ್ತು ಕುಡಿತಕ್ಕೆ ಬಿದ್ದು ಹಣವನ್ನೆಲ್ಲಾ ಖರ್ಚು ಮಾಡಿ ಆತ್ಮಹತ್ಯೆಗೆ ಶರಣಾಗಿದ್ದ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು  ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ